

ಕಲ್ಲಿನಂತೆಯೇ ಕಾಣುವ ಹಲ್ಲಿ



ಎಲೆಯಂಥ ಕೀಟ



ಕಂಡೂ ಕಾಣದಂತಿರುವ ಪತಂಗ



ಪರಿಸರದ ಬಣ್ಣದೊಂದಿಗೆ ಒಂದಾಗುವ ಜೇಡ



ಮೈ ತುಂಬಾ ಪಾಚಿ ತುಂಬಿಕೊಂಡು ಓಡಾಡುವ ಹುಳ

ಮರೆಸುವುದರಿಂದ ಇವುಗಳಿಗೆ ಆಗುವ ಉಪಯೋಗಗಳ ಬಗ್ಗೆ ಹೆಚ್ಚು ಸಂಶೋಧನೆ ನಡೆಯಬೇಕಿದೆ.

ಉದಾಹರಣೆಗೆ, ತೋಳ ಹಾವು ತನ್ನನ್ನು ವಿಷಕಾರಿ ಕಟ್ಟಹಾವಿನಂತೆ ಬಿಂಬಿಸಿಕೊಳ್ಳುತ್ತದೆ. ಮಣ್ಣು ಮುಕ್ಕ ಹಾವು ಮಾರಣಾಂತಿಕ ಕೊಳಕು ಮಂಡಲದಂತೆ ಕಾಣತೊಡಗುತ್ತದೆ. ಕೆಲವೊಂದು ಜಾತಿಯ ಜೇಡರ ಹುಳಗಳು ಬಸವನ ಹುಳದಂತೆ, ಚೇಳಿನಂತೆ, ಪಕ್ಷಿಯ ಹಿಕ್ಕೆಯಂತೆ ತಮ್ಮ ದೇಹಾಕೃತಿಯನ್ನು ಬದಲಿಸಿಕೊಳ್ಳುತ್ತವೆ. ಇದೆಲ್ಲಾ ಹೇಗೆ ಸಾಧ್ಯವಾಗುತ್ತದೆ? ಇವುಗಳು ತಮ್ಮ ಬಣ್ಣ ಮತ್ತು ಆಕಾರಗಳನ್ನು ಹೇಗೆ ರೂಪಾಂತರಿಸಿಕೊಳ್ಳುತ್ತವೆ ಎಂಬುದು ಇಂದಿಗೂ ವಿಶ್ವದ ಪರಿಸರ ವಿಜ್ಞಾನಿಗಳಿಗೆ ತಲೆಕೆಡಿಸಿಟ್ಟಿರುವ ವಿಚಾರ.

ಕಣ್ಣಿಗೆ ಕಾಣುವ ಪ್ರಕೃತಿಯ ದೊಡ್ಡ ಜೀವರಾಶಿಗಳ ಅಳೆದು ತೂಗಿದಂತೆ ಕೀಟಗಳ ಬದುಕಿನ ಸಂಗತಿಗಳನ್ನು ಸುಲಭಕ್ಕೆ ಅರಿಯಲಾಗುತ್ತಿಲ್ಲ. ಕೆಲ ಕಂಬಳಿ ಹುಳಗಳು ಕೆಲ ಹಾವುಗಳು, ಸಾಕಷ್ಟು ಕೀಟಗಳು ಪುಟ್ಟ ಕಡ್ಡಿಯಂತೆ, ಎಲೆಯಂತೆ ಬಿಂಬಿತವಾಗುತ್ತವೆ. ಅನೇಕ ಚಿಟ್ಟೆಗಳು ತಮ್ಮನ್ನು ಒಣಗಿದ ಎಲೆಗಳಂತೆ; ಬಣ್ಣದ ಹೂವುಗಳಂತೆ ರೂಪ ಬದಲಾಯಿಸಿ ಛದ್ಮವೇಷ ತೊಡುತ್ತವೆ. ತಾನು ಬೇಟೆಯಾಡಲು ಅಥವಾ ತಾನೇ ಬೇಟೆಯಾಗುವುದರಿಂದ ತಪ್ಪಿಸಿಕೊಳ್ಳಲು ಈ ಮಾರುವೇಷ ಸದುಪಯೋಗವಾಗುತ್ತದೆ.

ಪ್ರಕೃತಿಯ ದೊಡ್ಡ ಅಚ್ಚರಿ ನೋಡಿ. ಮಂದಗತಿಯಲ್ಲಿ ಚಲಿಸುವ ದೈತ್ಯ ಹೆಬ್ಬಾವು